ಓ ಎಸ್ ನಂ.66/2021
ಪಿ.ಡಬ್ಲ್ಯೂ-1 ವಿಜಯಲಕ್ಷ್ಮೀ ಗಂಡ ರಮೇಶ ಬಡಿಗೇರ
ತಂದೆ ಮಲ್ಲೇಶಪ್ಪ ಕುಂಬಾರ

**(ಇಂದು ದಿನಾಂಕಃ 22-11-2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.)**

<u>ಪಾಟೀ ಸವಾಲುಃ ೪ ಮತ್ತು ೬ನೇ ಪ್ರತಿವಾದಿಗಳ ಪರ ಶ್ರೀ ಜಿ ಎಸ್ ಬಿ ವಕೀಲರಿಂದ.</u>

ನನ್ನ ತಂದೆ ಮಲ್ಲೇಶಪ್ಪರವರಿಗೆ ೩ ಜನ ಸಹೋದರರು ಇರುತ್ತಾರೆ. ಸಾಕ್ಷಿಯು ಅವರೆಲ್ಲ ಈಗ ಮೃತರಾಗಿರುತ್ತಾರೆ ಎನ್ನುತ್ತಾರೆ. ಅವರಲ್ಲಿ ೨ ಜನ ಕಾಕಾಗಳಿಗೆ ಮಕ್ಕಳು ಇರುತ್ತಾರೆ ಮತ್ತು ಇನ್ನೊಬ್ಬ ನಮ್ಮ ಕಾಕಾರವರು ಮದುವೆ ಆಗಿರಲಿಲ್ಲ. ದಾವಾ ಜಮೀನು ನಮ್ಮ ತಾಯಿಯ ಜಮೀನು ಆಗಿರುತ್ತದೆ. ನಮ್ಮ ತಾಯಿಗೆ ಪಾರ್ವತಿ ಎಂದ ಸಹೋದರಿ ಇದ್ದರು, ಅವರು ಈಗ ಮೃತರಾಗಿರುತ್ತಾರೆ. ಪಾರ್ವತಿರವರು ಲಕ್ಷ್ಮೀಬಾಯಿರವರ ಮಗಳು ಎಂದರೆ ಸರಿ. ಪಾರ್ವತಿರವರಿಗೆ ಮಕ್ಕಳು ಇಲ್ಲ ಎಂದರೆ ಸರಿ. ಪಾರ್ವತಿರವರ ತಂದೆಯ ಹೆಸರು ಭೀಮಶಾ ಎಂದರೆ ಸರಿ. ನಮ್ಮ ತಾಯಿ ತೀರುವ ಮೊದಲು ಭೀಮಶಾರವರ ಆಸ್ತಿಗಳು ನಿಮ್ಮ ತಾಯಿಯ ಹೆಸರಿನಲ್ಲಿ ಆಗಿದ್ದವು ಎಂದರೆ ಸಾಕ್ಷಿಯು ನಮ್ಮ ತಾಯಿ ಮತ್ತು ಅವರ ಸಹೋದರಿಯಾದ ಪಾರ್ವತಿರವರ ಹೆಸರಿನಲ್ಲಿ ಜಂಟಿಯಾಗಿ ಆಗಿದ್ದವು ಎನ್ನುತ್ತಾರೆ. ನನ್ನ ತಾಯಿ ಸಲಬವ್ವ ಮತ್ತು ಅವರ ಸಹೋದರಿಯಾದ ಪಾರ್ವತಿ ಇಬ್ಬರು ಜಮೀನಿನಲ್ಲಿ ಅರ್ಧ-ಅರ್ಧ ಇಟ್ಟುಕೊಂಡಿದ್ದರು.

೨. ಪಾರ್ವತಿರವರು ಮೃತರಾದ ನಂತರ ನನ್ನ ಅಕ್ಕಳಾದ ಭೀಮಬಾಯಿ ದತ್ತುಪುತ್ರ ಎಂದು ಅವರ ಆಸ್ತಿಯನ್ನು ತನ್ನ ಮಗನ ಹೆಸರಿನಲ್ಲಿ ಮಾಡಿರುತ್ತಾಳೆ. ಸದರಿ ದತ್ತಕದ ಬಗ್ಗೆ ದಾಖಲೆಗಳು ಅವರ ಹತ್ತಿರ ಇರುಬಹುದು ನಾನು ಹಾಜರುಪಡಿಸಿಲ್ಲ. ಪಾರ್ವತಿರವರಿಗೆ

ಪ್ರತ್ಯೇಕವಾಗಿ ಜಮೀನು ಇದ್ದ ಕುರಿತು ದಾವೆಯಲ್ಲಿ ಬರೆಸಿಲ್ಲ ಎಂದರೆ ಸರಿ. ಭೀಮಶಾರವರಿಗೆ ಅವರ ಹಿರಿಯರಿಂದ ಜಮೀನು ಬಂದಿರುತ್ತದೆ. ನನ್ನ ತಾಯಿ ಮತ್ತು ಅವರ ಸಹೋದರಿಗೆ ಆಸ್ತಿ ಸ್ತ್ರೀ ಧನ ಎಂದು ಬಂದಿದೆ ಎಂದರೆ ಸಾಕ್ಷಿಯು ನನ್ನ ತಾಯಿಗೆ ಯಾರು ಸಹೋದರರು ಇರಲಿಲ್ಲ ಆದ್ದುದರಿಂದ ಅವರಿಗೆ ಆಸ್ತಿ ಬಂದಿದೆ ಎನ್ನುತ್ತಾರೆ. ದಾವಾ ಆಸ್ತಿ ನಮ್ಮ ಹಿರಿಯರ ಆಸ್ತಿ ಎಂದು ಸುಳ್ಳು ಹೇಳಿರುತ್ತೇನೆ ಎಂದರೆ ಸರಿಯಲ್ಲ.

೩. ಪಾರ್ವತಿರವರಿಗೆ ಯಾರು ವಾರಸುದಾರರು ಇಲ್ಲ ಎಂದರೆ ಸರಿ. ದತ್ತಕದ ಕುರಿತು ನಾನು ಯಾವುದೆ ದಾಖಲೆ ಹಾಜರುಪಡಿಸಿಲ್ಲ. ದತ್ತಕ ಹೋದವನ ಹೆಸರು ಅವಧೂತ ಎಂದು ಇರುತ್ತದೆ. ಅವಧೂತರವರನ್ನು ಈ ದಾವೆಯಲ್ಲಿ ಪಕ್ಷಗಾರರನ್ನಾಗಿ ಮಾಡಿಲ್ಲ ಎಂದರೆ ಸರಿ. ಸಾಕ್ಷಿಯು ಅವರ ತಾಯಿಯನ್ನು ಪಕ್ಷಗಾರರನ್ನಾಗಿ ಮಾಡಿರುತ್ತೇನೆ ಎನ್ನುತ್ತಾರೆ. ಅವಧೂತರವರಿಗೆ ಯಾವ ಜಮೀನು ಹೋಗಿದೆ ಎಂದು ಬರೆಸಿಲ್ಲ ಎಂದರೆ ಸರಿ.

೪. ನಮ್ಮ ತಾಯಿ ಸಲಬವ್ವರವರಿಗೆ ನಾವು ೪ ಜನ ಮಕ್ಕಳಿರುತ್ತೇವೆ. ಭೀಮಬಾಯಿ, ಭೀಮಶಾ, ದ್ಯಾವಮ್ಮ ಯಾನೆ ದೀಪಾರವರು ನನ್ನ ಸಹೋದರ-ಸಹೋದರಿಯಾಗಿರುತ್ತಾರೆ. ಗುರು ಕೂಡಾ ನನ್ನ ಸಹೋದರ ಎಂದರೆ ಸರಿ. ಸಾಕ್ಷಿಯು ಅವನು ೧೨ ವರ್ಷದವನಿದ್ದಾಗಲೆ ಮೃತನಾಗಿರುತ್ತಾನೆ ಎನ್ನುತ್ತಾರೆ. ಸದರಿ ವಿಚಾರ ದಾವೆಯಲ್ಲಿ ಬರೆಸಿಲ್ಲ ಎಂದರೆ ಸರಿ. ಗುರುರವರ ವಾರಸುದಾರರು ಯಾರು ಎಂದು ಬರೆಸಿಲ್ಲ ಎಂದರೆ ಸಾಕ್ಷಿಯು ಅವನಿಗೆ ೧೨ ವರ್ಷ ಇದ್ದಾಗಲೆ ಅವನು ಮೃತನಾಗಿರುತ್ತಾನೆ ಎನ್ನುತ್ತಾರೆ. ಅವನು ಸಾಯುವಾಗ ನಮ್ಮ ತಂದೆ-ತಾಯಿ ಇದ್ದರು. ಗುರುರವರ ವಾರಸುದಾರರು ಯಾರು ಎಂದು ನಿಖರವಾಗಿ ನಾನು ಬರೆಸಿಲ್ಲ ಎಂದರೆ ಸರಿ. ಕಾಳಮ್ಮ ನನ್ನ ಅಕ್ಕಳಾಗಿರುತ್ತಾಳೆ. ಅವಳ ಮದುವೆ ಆಗಿತ್ತು. ಅವಳು ೧೬ ವರ್ಷದವಳಿದ್ದಾಗಲೆ ಮೃತಳಾಗಿರುತ್ತಾಳೆ ಮತ್ತು ಅವಳಿಗೆ ಯಾವುದೆ ಮಕ್ಕಳು

ಇರುವುದಿಲ್ಲ. ಈ ದಾವೆಯಲ್ಲಿ ಕಾಳಮ್ಮನ ಕುರಿತು ನಾನು ಬರೆಸಿಲ್ಲ ಎಂದರೆ ಸರಿ. ನನ್ನ ತಾಯಿಯ ತಂದೆಯ ಹೆಸರು ಭೀಮಶಾ ಆಗಿರುತ್ತದೆ. ಅವರ ಹೆಸರನ್ನೆ ನನ್ನ ಅಣ್ಣನಿಗೆ ಭೀಮಶಾ ಎಂದು ಇಟ್ಟಿರುತ್ತಾರೆ. ನನ್ನ ಸಹೋದರ ಭೀಮಶಾ ಮತ್ತು ನನ್ನ ಅಜ್ಜ ಭೀಮಶಾ ಬೇರೆ-ಬೇರೆ ಎಂದರೆ ಸರಿ. ನನ್ನ ಅಣ್ಣನಾದ ಭೀಮಶಾ ಕೂಡಾ ಮೃತನಾಗಿರುತ್ತಾನೆ. ಭೀಮಶಾರವರಿಗೆ ಬಂಗಾರೆವ್ವ ಎಂಬ ಹೆಂಡತಿ ಇರುತ್ತಾರೆ. ಬಂಗಾರೆವ್ವರವರಿಗೆ ಮಕ್ಕಳು ಇರುವುದಿಲ್ಲ. ಶಾಂತಾಬಾಯಿರವರು ನನ್ನ ಅಣ್ಣನಾದ ಭೀಮಶಾರವರ ೨ನೇ ಹೆಂಡತಿಯಾಗಿರುತ್ತಾರೆ. ಸದರಿ ಶಾಂತಾಬಾಯಿ ಮೃತರಾಗಿರುತ್ತಾರೆ.

೫. ಶಾಂತಾಬಾಯಿರವರಿಗೆ ೪ ಜನ ಮಕ್ಕಳು ಇರುತ್ತಾರೆ. ಶಾಂತಾಬಾಯಿರವರಿಗೆ ೬ ಜನ ಮಕ್ಕಳು ಎಂದರೆ ಸರಿ. ಸಾಕ್ಷಿಯು ೨ ಮಕ್ಕಳು ಮೃತರಾಗಿರುತ್ತವೆ ಎನ್ನುತ್ತಾರೆ. ಯಾರು ಮೃತರಾಗಿರುತ್ತಾರೆ ಎಂದು ನಾನು ಬರೆಸಿಲ್ಲ ಎಂದರೆ ಸಾಕ್ಷಿಯು ಹುಟ್ಟಿದ ಕೂಡಲೆ ತೀರಿಕೊಂಡಿರುತ್ತದೆ ಎನ್ನುತ್ತಾರೆ. ನಾನು ಅದನ್ನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

೬. ದಾವಾ ಆಸ್ತಿಗಳು ನಮ್ಮ ಹಿರಿಯರಿಂದ ಬಂದಿಲ್ಲ ಎಂದರೆ ಸರಿಯಲ್ಲ. ದಾವಾ ಆಸ್ತಿಗಳು ನಮ್ಮ ತಾಯಿಯ ತವರು ಮನೆಯ ಕಡೆಯಿಂದ ನಮ್ಮ ತಾಯಿಗೆ ಬಂದ ಆಸ್ತಿಗಳು ಆಗಿರುತ್ತವೆ ಎಂದರೆ ಸರಿ.

ಮುಂದುವರೆದ ಪಾಟೀ ಸವಾಲಿಗೆ ಸಮಯ ಕೋರಿದ್ದರಿಂದ ಸಮಯಾವಕಾಶ ನೀಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿ ಅದೆ

ಹಿರಿಯ ಸಿವಿಲ್ ನ್ಯಾಯಾಧೀಶರು
ಅಫಜಲಪೂರ.